ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 20 ನೇ ಮಾರ್ಚ್, 2020

ಗ್ರಾಮ ಪಂಚಾಯತ್‌ಗಳಲ್ಲಿ ಆನ್‌ಲೈನ್ ತಂತ್ರಜ್ಞಾನದ ಬಗ್ಗೆ

ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

208 (1564) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಗ್ರಾಮ ಪಂಚಾಯಿತಿಗಳ ಕಾರ್ಯಾಚರಣೆಯ ಆನ್‌ಲೈನ್ ಸಾಫ್ಟ್‌ವೇರ್‌ಗಳ ಬಗ್ಗೆ ಪಂಚತಂತ್ರ Housing, Action soft, Priya soft, ಬಾಪೂಜಿ ಸೇವಾ ಕೇಂದ್ರದ ಸೇವೆಗಳ ತಂತ್ರಾಂಶಗಳ ಕಾರ್ಯಚರಣೆಯನ್ನು ಬಿ.ಎಸ್.ಎನ್.ಎಲ್. ಇಂಟರ್‌ನೆಟ್ ಕನೆಕ್ಟಿವಿಟಿಗೆ ಸಹಕರಿಸುವಂತೆ ಸಾಫ್ಟ್‌ವೇರ್‌ಗಳನ್ನು ಸೃಜಿಸಲಾಗಿದೆಯೇ ;

(ಆ) ಹಾಗಿದ್ದಲ್ಲಿ, BSNL HI-SPEED ಇಂಟರ್‌ನೆಟ್ ಸೌಲಭ್ಯವು ರಾಜ್ಯದ ಎಲ್ಲಾ ಗ್ರಾಮೀಣ ಪ್ರದೇಶಗಳ ಗ್ರಾಮ ಪಂಚಾಯಿತಿಗೆ ಲಭ್ಯವಾಗಿದೆಯೇ ; ಈ ಕುರಿತು 2017-18, 2018-19, 2019-20ನೇ ಸಾಲಿನ ವಿವರಗಳನ್ನು ನೀಡುವುದು ;

(ಇ) BSNL HI-SPEED ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)